# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 116 (163) |
| ಸದಸ್ಯರ ಹೆಸರು | : | ಶ್ರೀ ಡಿ.ಟಿ. ಶ್ರೀನಿವಾಸ್ ( ಡಿ.ಟಿ.ಎಸ್ )<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.08.2026 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಿಂದುಳಿದ ವರ್ಗಗಳ ಇಲಾಖೆಯಿಂದ ಇತ್ತೀಚಿಗೆ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗಳ ಬಗ್ಗೆ ಸರ್ಕಾರವು ಈಗಾಗಲೇ ವರದಿ ಸ್ವೀಕರಿಸಿದೆಯೇ ; | ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸಿದ ರಾಜ್ಯದ ಎಲ್ಲಾ ನಾಗರೀಕರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2025ರ ವರದಿಯು ದಿನಾಂಕ:27.05.2026 ರಂದು ಸ್ವೀಕೃತವಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನ್ವಯ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-2025ರ ದತ್ತಾಂಶಗಳ ಗೌಪ್ಯತೆಯನ್ನು ಕಾಪಾಡಬೇಕಾಗಿದ್ದು ಅದರಂತೆ ಕ್ರಮವಹಿಸಲಾಗಿದೆ. |
| ಆ) | ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಶೇಕಡಾವಾರು ಪ್ರಮಾಣ ಎಷ್ಟು; ಅದಕ್ಕೆ ಸರಿಸಮನಾಗಿ ಹಿಂದುಳಿದ ವರ್ಗಗಳನ್ನು ಮತ್ತು ಹಿಂದುಳಿದ ವರ್ಗಗಳ ಅಲೆಮಾರಿಗಳನ್ನು ಮುಖ್ಯ ವಾಹಿನಿಗೆ ತರಲು ರಾಜ್ಯ ಸರ್ಕಾರವು ಕೈಗೊಂಡ ಕ್ರಮಗಳೇನು ; | ರಾಜ್ಯದ ಎಲ್ಲಾ ನಾಗರಿಕರ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿ ಸ್ವೀಕೃತಗೊಂಡಿದ್ದು, ಹಿಂದುಳಿದ ವರ್ಗಗಳ ಸಮುದಾಯಗಳು ಒಳಗೊಂಡಿರುತ್ತದೆ. ಪ್ರಸ್ತುತ, ಮಾನ್ಯ ಉಚ್ಚ ನ್ಯಾಯಾಲಯದ ಆದೇಶದನುಸಾರ ಗೌಪ್ಯತೆಯನ್ನು ಕಾಪಾಡಲಾಗಿದೆ.<br><br>ಹಿಂದುಳಿದ ವರ್ಗಗಳ ಅಲೆಮಾರಿಗಳನ್ನು ಮುಖ್ಯವಾಹಿನಿಗೆ ತರಲು ಹಾಗೂ ಅವರ ಸಬಲೀಕರಣಕ್ಕಾಗಿ ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ ನಿಯಮಿತದಿಂದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>1. ಗಂಗಾ ಕಲ್ಯಾಣ ನೀರಾವರಿ ಯೋಜನೆ<br>2. ಸ್ವಯಂ ಉದ್ಯೋಗ ನೇರ ಸಾಲ ಯೋಜನೆ<br>3. ಸ್ವಯಂ ಉದ್ಯೋಗ ನೇರ ಸಾಲ ಯೋಜನೆ (ಬ್ಯಾಂಕ್ ಮುಖೇನ)<br>4. ಸ್ವಾವಲಂಬಿ ಸಾರಥಿ ಯೋಜನೆ<br>5. ಸ್ವಾತಂತ್ರ್ಯ ಅಮೃತ ಮಹೋತ್ಸವ ಮುನ್ನಡೆ ಯೋಜನೆ<br>6. ಅರಿವು ಶೈಕ್ಷಣಿಕ ಸಾಲ ಯೋಜನೆ (ಹೊಸದು)<br>7. ಅರಿವು ಶೈಕ್ಷಣಿಕ ಸಾಲ ಯೋಜನೆ (ನವೀಕರಣ)<br>8. ವಿದೇಶಿ ಸಾಲ ಯೋಜನೆ (ಹೊಸದು)<br>9. ಆಹಾರ ಕಿಯೋಸ್ಕ್<br>10. ಭೂ ಒಡೆತನ ಯೋಜನೆ<br>11. ಸೈನಿಕ ಸೇನೆ ಇತರೆ ಯೂನಿಫಾರ್ಮ್ ಸೇವೆಗಳಿಗೆ / ಸೇರ ಬಯಸುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ತರಬೇತಿ ಯೋಜನೆ |

| | | |
|---|---|---|
| ಇ) | ಇದಕ್ಕೆ ಸಂಬಂಧಿಸಿದಂತೆ, ಸರ್ಕಾರವು ಯಾವುದಾದಾದರೂ ಹೊಸ ಯೋಜನೆ ರೂಪಿಸಲಾಗಿದೆಯೇ ; | 2026-27ನೇ ಸಾಲಿನಲ್ಲಿ ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮ ನಿಯಮಿತಕ್ಕೆ ರೂ.16.50 ಕೋಟಿಗಳ ಅನುದಾನ ಹಂಚಿಕೆಯಾಗಿರುತ್ತದೆ. ಯೋಜನಾವಾರು ಅನುದಾನದ ವಿವರ ಈ ಕೆಳಕಂಡಂತಿದೆ. |
| ಈ) | ರೂಪಿಸಿದ್ದಲ್ಲಿ, ಸದರಿ ಯೋಜನೆಗೆ ನಿಗಧಿಪಡಿಸಿರುವ ಅನುದಾನ ಎಷ್ಟು? (ಪೂರ್ಣ ಪ್ರಮಾಣದ ಮಾಹಿತಿ ನೀಡುವುದು ) | (see table below) |

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆಯ ಹೆಸರು | ಭೌತಿಕ | ಆರ್ಥಿಕ | ಷರಾ |
|---|---|---|---|---|
| 1. | ಸ್ವಯಂ ಉದ್ಯೋಗ ನೇರಸಾಲ ಯೋಜನೆ | 230 | 230.00 | ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 1 ರಂತೆ |
| 2. | ಅರಿವು ಶೈಕ್ಷಣಿಕ ಸಾಲಯೋಜನೆ (ನವೀನ) | 118 | 118.00 | ಪ್ರತಿ ಜಿಲ್ಲೆಗೆ 3 ರಿಂದ 4 ರಂತೆ |
| 3. | ಅರಿವು ಶೈಕ್ಷಣಿಕ ಸಾಲಯೋಜನೆ (ನವೀಕರಣ) (ಅಂದಾಜು) | 180 | 180.00 | |
| 4. | ಸ್ವಾವಲಂಬಿ ಸಾರಥಿ ಯೋಜನೆ | 68 | 204.00 | ಪ್ರತಿ ಜಿಲ್ಲೆಗೆ 1 ರಿಂದ 2 ರಂತೆ |
| 5. | ಗಂಗಾ ಕಲ್ಯಾಣ ಯೋಜನೆ | 100 | 325.00 | ಪ್ರತಿ ಜಿಲ್ಲೆಗೆ 3 ರಿಂದ 4 ರಂತೆ |
| 6. | ಸರ್ಕಾರದ / ಮಾನ್ಯ ಸಚಿವರ ವಿವೇಚನಾ ಕೋಟಾದಡಿ ಕಾಯ್ದಿರಿಸಿದ ಮೊತ್ತ ಶೇ.5ರಷ್ಟು | - | 82.50 | |
| 7. | ನಿಗಮದ ಮಾನ್ಯ ಅಧ್ಯಕ್ಷರ / ನಿರ್ದೇಶಕ ಮಂಡಳಿ ವಿವೇಚನಾ ಕೋಟಾದಡಿ ಕಾಯ್ದಿರಿಸಿದ ಮೊತ್ತ ಶೇ.5ರಷ್ಟು | - | 82.50 | |
| 8. | ಡಿಬಿಸಿಡಿಸಿ ರವರಿಗೆ ಆಡಳಿತಾತ್ಮಕ ವೆಚ್ಚ ಭರಿಸಲು (ಸರ್ಕಾರದ ಆದೇಶಕ್ಕೊಳಪಟ್ಟು) | - | 124.00 | |
| 9. | ಐಇಸಿ ಚಟುವಟಿಕೆ ವೆಚ್ಚ (ಸರ್ಕಾರದ ಆದೇಶಕ್ಕೆ ಒಳಪಟ್ಟು) | - | 82.00 | |
| | ಒಟ್ಟು : | 696 | 1650.00 | |

**ಸಂಖ್ಯೆ: ಹಿಂವಕ 248 ಬಿಸಿಎ 2026**

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು